ಕ್ರಿ.ಮಿ. 162/2026 ಪಿ.ಡಬ್ಲೂ- 1 ಮುಮತಾಜ ಮುಲ್ತಾನಿ

**ದಿನಾಂಕಃ 12.08.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು.**

**ಮುಖ್ಯ ವಿಚಾರಣೆಃ ಅರ್ಜಿದಾರ ಪರ ಶ್ರೀಃ ಆರ್ ಆರ್ ಜಿ ವಕೀಲರಿಂದ-**

ನಾನು ಅರ್ಜಿದಾರಳಿರುತ್ತೇನೆ. ಈ ದಿನ ನಾನು ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಿರುತ್ತೇನೆ. ನನ್ನ ಪ್ರಮಾಣ ಪತ್ರಕ್ಕೆ ನಾನೇ ಮಾಹಿತಿ ನೀಡಿರುತ್ತೇನೆ. ಅದರಲ್ಲಿ ಬರೆದ ಎಲ್ಲ ಸಂಗತಿಗಳು ಸತ್ಯವಾಗಿರುತ್ತದೆ. ಅದಕ್ಕೆ ನಾನು ಸಹಿ ಮಾಡಿರುತ್ತೇನೆ.

ಈ ದಿನ ನಾನು ನನ್ನ ಪರವಾಗಿ ಕೆಲವೊಂದು ದಾಖಲೆಗಳನ್ನು ಸಲ್ಲಿಸುತ್ತಿದ್ದೇನೆ. ಅವುಗಳನ್ನು ನನ್ನ ಪರವಾಗಿ ನಿಶಾನೆಗಳಾಗಿ ಗುರುತಿಸಬೇಕೆಂದು ಕೋರಿಕೊಳ್ಳುತ್ತೇನೆ.

ಅರ್ಜಿದಾರಳು ಸಲ್ಲಿಸಿದ ದಾಖಲೆಗಳನ್ನು ಈ ಕೆಳಕಂಡಂತೆ ನಿಶಾನೆಗಳಾಗಿ ಗುರುತಿಸಲಾಗಿದೆ.

| ದಾಖಲಾತಿಗಳ ವಿವರ | ನಿಶಾನೆ |
|---|---|
| ಅಲಭ್ಯ ಪ್ರಮಾಣ ಪತ್ರ | ನಿ.ಪಿ-1 |
| ಎಸ್ ಎಸ್ ಎಲ್ ಸಿ ಮಾರ್ಕ್ಸ್ ಕಾರ್ಡನ ನಕಲು ಪ್ರತಿ | ನಿ.ಪಿ-2 |
| ಎಲ್ ಸಿ ಯ ನಕಲು ಪ್ರತಿ | ನಿ.ಪಿ-3 |
| ಆಧಾರ ಕಾರ್ಡನ ನಕಲು ಪ್ರತಿ | ನಿ.ಪಿ-4 |

**ಪಾಟಿ ಸವಾಲು : ಎದುರುದಾರ ಪರ ಸರಕಾರಿ ವಕೀಲರಿಂದ -**

ನನ್ನ ತಾಯಿಯ ತವರು ಮನೆ ಬಿ ಕೆ ಶಿರಹಟ್ಟಿ , ಹುಕ್ಕೇರಿ ತಾಲೂಕು. ನಾವು 3 ಜನ ಮಕ್ಕಳು. ಇಬ್ಬರು ಹೆಣ್ಣು ಮಕ್ಕಳು ಮತ್ತು ಒಬ್ಬ ಗಂಡು ಮಗ. ನಾನು ಅಕ್ಕಮಹಾದೇವಿ ಕನ್ಯಾ ಶಾಲೆಯಲ್ಲಿ 8 ರಿಂದ 10 ನೇ ತರಗತಿ ವರೆಗೆ ಓದಿರುತ್ತೇನೆ. 1 ರಿಂದ 7 ನೇ ತರಗತಿವರೆಗೆ ಸಂಕೇಶ್ವರದ ಶುಗರ ಫ್ಯಾಕ್ಟರಿಯ ಶಾಲೆಯಲ್ಲಿ ಓದಿರುತ್ತೇನೆ. ನಾನು ನನ್ನ ತಂದೆ ತಾಯಿಗೆ 3 ನೇ ಸಂತಾನ. ನಾನು ಈಗ ಸಂಕೇಶ್ವರದಲ್ಲಿ ವಾಸವಾಗಿರುತ್ತೇನೆ. ನನ್ನ ತಂದೆ ಊರು ಸಂಕೇಶ್ವರ , ನನ್ನ ಗಂಡನ ಮನೆ ಬಟಕುರ್ಕಿ . ಸರ್ಕಾರಿ ಸೌಲಭ್ಯ ಪಡೆಯಲು ನನಗೆ ಜನ ಪ್ರಮಾಣ ಪತ್ರದ ಅವಶ್ಯಕತೆ ಇದೆ. ಆದ್ದರಿಂದ ಈ ಅರ್ಜಿ ಸಲ್ಲಿಸಿರುತ್ತೇನೆ.

ಮುಂದುವರೆದ ವಾಟಿ ಸವಾಲಿಗೆ ಕಾಲಾವಕಾಶ ಕೋರಿದ್ದರಿಂದ ಮುಂದೂಡಲಾಯಿತು.

(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

**ಓ ಹೆ ಕೇ ಸರಿ ಅದೇ**

(ಆದಿತ್ಯ ಆರ್. ಕಲಾಲ್)
**ಸಿ ಜೆ ಮತ್ತು ಜೆ ಎಂ ಎಫ್ ಸಿ, ಹುಕ್ಕೇರಿ.**